

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಮಿತಿಯುಂಟೇ ಮಾನವನ ಕ್ರೌರ್ಯಕ್ಕೆ?....

"ನನ್ನ ಹೆಸರು ರತನ್ ದೇವಿ. ಪತಿಯ ಹೆಸರು ಚಾಜೂ ಭಗತ್. ಮದುವೆಯಾಗಿ ಕೆಲವೇ ವರ್ಷಗಳು ಆಗಿದ್ದವು. ಸುಖಿ ಸಂಸಾರ. ಆ ದಿನ ಸಂಜೆ ವೇಳೆಗೆ ಕೆಲಸ ಮಾಡಿ ಆಯಾಸಗೊಂಡಿದ್ದ ನಾನು ಹಾಗೆಯೇ ಅಡ್ಡಾಗಿ ಸಣ್ಣ ನಿದ್ರೆ ಮಾಡುತ್ತಿದ್ದೆ. ಆಗ ನನಗೆ ದಿಢೀರನೆ ಗುಂಡು ಹಾರಿಸಿದ ಶಬ್ದ ಕೇಳಿ ಎಚ್ಚರವಾಯಿತು. ಅದೇನು ಎಂದು ಎದ್ದು ಕುಳಿತುಕೊಳ್ಳುವಷ್ಟರಲ್ಲಿ ಮತ್ತಷ್ಟು ಗುಂಡುಗಳು ಹಾರಿದ ಶಬ್ದ ಕೇಳಿ ನನಗೆ ದಿಗಿಲಾಯಿತು. ಗುಂಡು ಹಾರುವ ಶಬ್ದ ನಿಂತು ಇಷ್ಟು ಹೊತ್ತಾದರೂ ಅವರು ಮನೆಗೆ ಬಂದಿಲ್ಲ ಎಂದರೆ ಅವರಿಗೆ ಏನೋ ಆಗಿರಬಹುದು ಎಂಬ ಭಾವನೆ ಮನದಲ್ಲಿ ಮೂಡಲಾರಂಭಿಸಿತು. ಮನೆಯಲ್ಲಿ ಒಬ್ಬಳೇ ಬೇರೆ! ಆತಂಕ, ಭಯದಿಂದ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದೆ. ಮತ್ತೆ ಸ್ವಲ್ಪ ಹೊತ್ತು ಕಳೆಯಿತು. ಸಾವರಿಸಿಕೊಂಡು ಮನೆಯಿಂದ ಎದ್ದು ಹೊರಗೆ ಬಂದೆ. ಅಷ್ಟರಲ್ಲಿ ಕತ್ತಲು ಆವರಿಸಲಾರಂಭಿಸಿತ್ತು. ಅತ್ತ ಕಡೆ ಹೊರಟೆ. ಹತ್ತಿರ ಹತ್ತಿರ ಹೋದಂತೆ ಅನೇಕರ ಕೂಗಾಟ, ಕಿರುಚಾಟ, ನರಳಾಟ, ಆಕ್ರಂದನಗಳು ಕಿವಿಗೆ ಬೀಳುತ್ತಿದ್ದವು. ಆ ಕಿರಿದಾದ ಓಣಿ ದಾಟಿ ಒಳಗೆ ಪ್ರವೇಶಿಸಲು ಹೆದರಿಕೆ! ಅಳುಕುತ್ತಲೇ ಒಳಗೆ ಹೋಗಿ, ಅಲ್ಲಿನ ಪರಿಸ್ಥಿತಿಯನ್ನು ನೋಡಿದ್ದೇ ತಡ, ತಲೆ ಸುತ್ತು ಬಂದಂತಾಯ್ತು! ಆ ಭೀಕರ ದೃಶ್ಯ! ರಾಶಿ ರಾಶಿ ಹೆಣಗಳು! ರಕ್ತದ ಹೊಳೆ! ಗಾಯಗೊಂಡವರ ಆಕ್ರಂದನ! ಅಲ್ಲಿ ಗಾಯಾಳುಗಳು, ಶವಗಳು, ಕಿತ್ತು ಹೊರಬಂದಿದ್ದ ದೇಹಗಳ ಅಂಗಾಂಗಗಳು, ಮಣ್ಣಿನಲ್ಲಿ ಇಂಗುತ್ತಿದ್ದ ರಕ್ತ, ಅಸಹನೀಯ ಕೆಟ್ಟ ವಾಸನೆ! ಇವುಗಳ ಹೊರತಾಗಿ ಬೇರೇನೂ ಇರಲಿಲ್ಲ. ಪ್ರಾಯಶಃ ಅಲ್ಲಿದ್ದ ಏಕೈಕ ಜೀವಂತ ಹಾಗೂ ಗಾಯಗೊಂಡಿರದ ವ್ಯಕ್ತಿ ಎಂದರೆ ನಾನೊಬ್ಬಳೇ! ಆ ಹೆಣಗಳ ರಾಶಿಯಲ್ಲಿ ನಾನು ನನ್ನ ಪತಿಯನ್ನು ಹುಡುಕಲಾರಂಭಿಸಿದೆ. ಅವರು ಬದುಕಿರಲಿ, ಬದುಕಿರಲಿ ಎಂದು ಪದೇ ಪದೇ ದೇವರನ್ನು ಪ್ರಾರ್ಥಿಸುತ್ತಿದ್ದೆ. ಅನೇಕ ಹೆಣಗಳು ನೆಲಕ್ಕೆ ಅಂಗಾತ ಬಿದ್ದಿದ್ದವು. ಪ್ರತಿ ಶವವನ್ನು ಎತ್ತುವಾಗಲೂ ಈ ಶವ ನನ್ನ ಪತಿಯ ಶವ ಆಗದಿರಲಿ ಎಂದೇ ಪ್ರಾರ್ಥಿಸುತ್ತಿದ್ದೆ. ಹಾಗೇ ಹುಡುಕುತ್ತಾ ಒಂದು ಗೋಡೆಯ ಸಮೀಪ ಹೋದೆ. ಅಲ್ಲಿಯೂ ಹೆಣಗಳ ರಾಶಿ ಬಿದ್ದಿತ್ತು. ಒಂದು ಶವ ಮಕಾಡೆ ಬಿದ್ದಿತ್ತು. ಅದನ್ನು ಎತ್ತಿದೆ! ಅಯ್ಯೋ ನನ್ನ ಪ್ರಾರ್ಥನೆ ದೇವರನ್ನು ಮುಟ್ಟಲಿಲ್ಲ! ಅದು ನನ್ನ ಪತಿಯ ಶವ ಆಗಿತ್ತು! ನೆಲ ರಕ್ತದಿಂದ ಒದ್ದೆಯಾಗಿ, ಸಣ್ಣ ಗುಂಡಿಯಂತೆ ನಿಂತಿತ್ತು! ಕುಸಿದು ಬಿದ್ದೆ. ಅತ್ತೂ ಅತ್ತೂ ಕಣ್ಣೀರು ಇಂಗಿಹೋದವು. ಇಹಪರದ ಅರಿವೇ ಇಲ್ಲದಂತಾಗಿಬಿಟ್ಟಿದ್ದೆ! ಆ ಭಯಾನಕ ವಾತಾವರಣದಲ್ಲಿ ರಕ್ತಸಿಕ್ತ ಹೆಣಗಳ ನಡುವೆ ನನ್ನ ಪತಿಯ ಶವ ಮುಂದಿಟ್ಟುಕೊಂಡು ಇಡೀ ರಾತ್ರಿ ಹೇಗೆ ಕಳೆದೆನೋ ನನಗೇ ಗೊತ್ತಿಲ್ಲ. ಆ ರಾತ್ರಿ ಅಲ್ಲಿ ನಾನು ಅನುಭವಿಸಿದ ಸಂಕಟ, ಯಾತನೆ, ಹಿಂಸೆ, ಅಸಹಾಯಕತೆ, ಆಕ್ರೋಶ ಇವೆಲ್ಲ ನನಗೆ ಮಾತ್ರ ಗೊತ್ತು. ನನ್ನನ್ನು ಬಿಟ್ಟರೆ ಆ ದೇವರಿಗೆ ಗೊತ್ತು!...."

ಇದು ಯಾವುದೋ ಪತ್ತೇದಾರಿ ಕಾದಂಬರಿಯಿಂದ ಆಯ್ದ ಭಾಗವಲ್ಲ. ಸ್ವಾತಂತ್ರ್ಯಸಂಗ್ರಾಮದ ದಿನಗಳಲ್ಲಿ ಪಂಜಾಬಿನ ಜಲಿಯನ್‌ವಾಲಾ ಬಾಗ್‌ನಲ್ಲಿ ನಡೆದ ಭೀಕರ ಹತ್ಯಾಕಾಂಡದಲ್ಲಿ ತನ್ನ ಪತಿಯನ್ನು ಕಳೆದುಕೊಂಡಿದ್ದ ನಿರ್ಭಾಗ್ಯ ಮಹಿಳೆಯೊಬ್ಬಳು ವಿಚಾರಣಾಸಮಿತಿಯ ಮುಂದೆ ನೀಡಿದ ಅತ್ಯಂತ ಹೃದಯವಿದ್ರಾವಕ ಹೇಳಿಕೆ. ಇಲ್ಲಿಗೆ ಸರಿಯಾಗಿ 90 ವರ್ಷಗಳ ಹಿಂದೆ ಅಂದರೆ 1919 ರ ಏಪ್ರಿಲ್ 13 ರಂದು ನಡೆದ ದಾರುಣ ಘಟನೆ. ಪಂಜಾಬಿನ ಆಗಿನ ಲೆಫ್ಟಿನೆಂಟ್ ಗವರ್ನರ್ ಆದ ಸರ್ ಮೈಖೇಲ್ ಓಡ್ವಯರ್ (Sir Michael O'Dwyer) ಸ್ವಾತಂತ್ರ್ಯಹೋರಾಟವನ್ನು ಹತ್ತಿಕ್ಕುವ ಸಲುವಾಗಿ ಜನರಿಗೆ ಪ್ರಚೋದನೆ ಮಾಡುತ್ತಿದ್ದಾರೆಂಬ ಆಪಾದನೆಯ ಮೇರೆಗೆ ಕೆಲವಾರು ಮುಖಂಡರನ್ನು ದಸ್ತಗಿರಿ ಮಾಡಿ ಗಡಿಪಾರು ಮಾಡಿದ್ದನು. ಗಾಂಧೀಜೀಯನ್ನು ಪಂಜಾಬ್ ಪ್ರವೇಶಿಸದಂತೆ ನಿರ್ಬಂಧಿಸಿದ್ದನು. ಇದರಿಂದ ಉದ್ರಿಕ್ತರಾದ ಜನರು ರಾಜ್ಯಾದ್ಯಂತ ಅಲ್ಲಲ್ಲಿ ಗುಂಪುಗುಂಪಾಗಿ ಸೇರಿ ಪ್ರತಿಭಟನೆ ಮಾಡತೊಡಗಿದರು. ಏಪ್ರಿಲ್ 13 ರಂದು ಪಂಜಾಬಿನ ಪ್ರಮುಖನಗರವಾದ ಅಮೃತ್‌ಸರ್‌ನ ಮಧ್ಯಭಾಗದಲ್ಲಿರುವ ಜಲಿಯನ್‌ವಾಲಾ ಬಾಗ್‌ನಲ್ಲಿ ಸಭೆ ಏರ್ಪಾಡಾಗಿತ್ತು. ಅಂದು ಸಿಖ್ಖರಿಗೆ ಅತ್ಯಂತ ಪವಿತ್ರವಾದ ಬೈಸಾಖಿ ಹಬ್ಬದ ದಿನ. ಅಮೃತಸರದಲ್ಲಿ ಸಿಖ್ಖರ ಪವಿತ್ರಕ್ಷೇತ್ರವಾದ ಸ್ವರ್ಣಮಂದಿರವಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಸುತ್ತಮುತ್ತಲ ಹಳ್ಳಿಗಳಿಂದ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜನರು ಜಲಿಯನ್‌ವಾಲಾ ಬಾಗ್‌ನಲ್ಲಿ ಜಮಾಯಿಸಿದ್ದರು. ಬಾಗ್ ಎಂದರೆ ಉದ್ಯಾನವನ. ಹಿಂದಿನ ರಾಜಮಹಾರಾಜರುಗಳು ಬಳಸುತ್ತಿದ್ದ ಉದ್ಯಾನವನದ ಒಂದು ವಿಶಾಲವಾದ ಭಾಗವದು. ಸುತ್ತಲೂ ಮನೆಗಳು ಮತ್ತು ಗೋಡೆ. ಅದಕ್ಕೆ ಹೋಗಲು ನಾಲ್ಕೈದು ಕಿರಿದಾದ ಓಣಿಗಳು. ಸುಮಾರು 20 ಸಾವಿರಕ್ಕೂ ಹೆಚ್ಚು ಜನರು ಸೇರಿದ್ದರು. ಬ್ರಿಗೇಡಿಯರ್ ಜನರಲ್ ರೆಗಿನಾಲ್ಡ್ ಡಯರ್ (Reginald Dyer) ತನ್ನ ಸೇನಾತುಕಡಿಯೊಂದಿಗೆ ಸಂಜೆ 5 ಗಂಟೆಗೆ ಧಾವಿಸಿದ. ಒಳಗೆ ವೇದಿಕೆಯ ಮೇಲೆ ಅಮೃತಸರದ 'ವಕ್ತ್' ಪತ್ರಿಕೆಯ ಸಂಪಾದಕರಾಗಿದ್ದ ಪಂಡಿತ್ ದುರ್ಗಾದಾಸ್‌ರವರ ಭಾಷಣ ನಡೆಯುತ್ತಿತ್ತು. ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಓದಲಾರಂಭಿಸಿದ್ದರು. ಜನರಲ್ ಡಯರ್ ಸುತ್ತಲೂ ಕಣ್ಣುಹಾಯಿಸಿದ. ಗುಂಡುಹಾರಿಸುವುದಾಗಿ ಯಾವ ಮುನ್ಸೂಚನೆಯನ್ನೂ ನೀಡದೆ ಕ್ರುದ್ಧನಾಗಿ 'ಫೈಯರ್' ಎಂದು ಸಿಪಾಯಿಗಳಿಗೆ ಆರ್ಡರ್ ಮಾಡಿದ. ಕೂಡಲೇ ಅಮಾಯಕ ಜನರ ಮೇಲೆ ಗುಂಡಿನ ಮಳೆಗರೆಯಲಾಯಿತು. ಕ್ಷಣಾರ್ಧದಲ್ಲಿ ಹೆಣಗಳು ಉರುಳತೊಡಗಿದವು. ಭಯಭೀತಿಗೊಂಡ ಜನರು ಕಂಗೆಟ್ಟು ಓಡಿಹೋಗಲಾರದೆ 8-10 ಅಡಿ ಎತ್ತರದ ಗೋಡೆಯನ್ನು ಹಾರಿ ಬದುಕಲು ಪ್ರಯತ್ನಮಾಡಿ ಗುಂಡಿಗೆ ಆಹುತಿಯಾದರು. ಹತ್ತಿರದಲ್ಲಿದ್ದ ತೆರೆದ ಬಾವಿಗೆ

- 2 -

ಹಾರಿ ಪ್ರಾಣ ಉಳಿಸಿಕೊಳ್ಳಲು ಯತ್ನಿಸಿದ ನೂರಾರು ಜನ ನೂಕುನುಗ್ಗಲಿನಲ್ಲಿ ನೀರಿನೊಳಗೆ ಮುಳುಗಿ ಸತ್ತರು. ಆದರೂ ಜನರಲ್ ಡಯರ್‌ನ ಕಲ್ಲುಹೃದಯ ಕರಗಲಿಲ್ಲ. ಒಂದು ಲೆಕ್ಕಾಚಾರದ ಪ್ರಕಾರ 10 ರಿಂದ 15 ನಿಮಿಷಗಳ ಕಾಲ ನಡೆದ ಆ ಗುಂಡಿನ ಧಾಳಿಯಲ್ಲಿ 1,650 ಗುಂಡುಗಳು ಹಾರಿದ್ದವು! ಮಹಿಳೆಯರೂ ಮಕ್ಕಳೂ ಸೇರಿದಂತೆ ನೂರಾರು ಜನ ಸತ್ತುಹೋದರು, ಸಾವಿರಾರು ಜನ ಗಾಯಗೊಂಡರು. ಜನರಲ್ ಡಯರ್ ಕೈಗೊಂಡ ಈ ಗುಂಡಿನ ಧಾಳಿಯನ್ನು ಖಂಡಿಸದೆ ಪಂಜಾಬ್ ಗವರ್ನರ್ ಆದ ಮೈಖೇಲ್ ಓಡ್ವಯರ್ ಸಮರ್ಥನೆ ಮಾಡಿ ಅನುಮೋದಿಸಿ ಒಂದು ತಂತಿಸಂದೇಶವನ್ನು ಕಳುಹಿಸಿದನು. ಡಯರ್ ಬ್ರಿಟಿಷರ ಗೌರವ ಮತ್ತು ಘನತೆಯನ್ನು ಎತ್ತಿಹಿಡಿದ ದಕ್ಷ ಅಧಿಕಾರಿಯೆಂದು ಬ್ರಿಟಿಷ್‌ಮಾಧ್ಯಮಗಳು ಗುಣಗಾನ ಮಾಡಿದವು.

ಈ ಬರ್ಬರ ಹತ್ಯೆ ಪಂಜಾಬ್ ಪ್ರದೇಶದ ಜನರಲ್ಲಿ ಕೋಪ-ತಾಪಗಳನ್ನುಂಟುಮಾಡಿತು. ಗಾಂಧೀಜೀಯ ಅಸಹಕಾರ ಚಳುವಳಿಗೆ ದಾರಿ ಮಾಡಿಕೊಟ್ಟಿತು. ವಿಶ್ವಕವಿ ರವೀಂದ್ರನಾಥ ಠಾಗೂರ್‌ರವರು ಬ್ರಿಟಿಷ್‌ಸರ್ಕಾರ ನೀಡಿದ್ದ 'ನೈಟ್‌ಹುಡ್' ಪದವಿಯನ್ನು ತಿರಸ್ಕರಿಸಿ ವೈಸ್‌ರಾಯ್‌ಗೆ ಪ್ರತಿಭಟನಾಪತ್ರ ಬರೆದರು. ಲಾರ್ಡ್ ವಿಲಿಯಂ ಹಂಟರ್ ಅಧ್ಯಕ್ಷತೆಯಲ್ಲಿ ವಿಚಾರಣಾಸಮಿತಿ ನೇಮಕವಾಯಿತು. ಸಮಿತಿಯಲ್ಲಿ ಮೂವರು ಭಾರತೀಯ ಸದಸ್ಯರೂ ಇದ್ದರು. ಅವರು ಪ್ರಶ್ನೆಗಳ ಸುರಿಮಳೆಗರಿದು ಡಯರ್‌ನ ಮೈನೀರಿಳಿಸಿದರು. ಆದರೂ ಅವನಿಗೆ ತಾನು ಮಾಡಿದ್ದು ತಪ್ಪು ಎಂಬ ಅರಿವು ಮೂಡಲಿಲ್ಲ. ಗಾಯಾಳುಗಳಿಗೆ ವೈದ್ಯಕೀಯ ನೆರವು ಏಕೆ ನೀಡಲಿಲ್ಲ ಎಂಬ ಪ್ರಶ್ನೆಗೆ 'ಅದು ನನ್ನ ಕೆಲಸವಲ್ಲ' ಎಂಬ ಅಹಂಕಾರದ ಮಾತನ್ನಾಡಿದ. ಸಮಿತಿಯಲ್ಲಿ ವಾದವಿವಾದಗಳ ಸಂಘರ್ಷ ನಡೆಯಿತು. ಕೊನೆಯದಾಗಿ ಜಲಿಯನ್‌ವಾಲಾ ಬಾಗ್‌ನಲ್ಲಿ ಸೇರಿದ್ದ ಸಭೆ ಯಾವುದೇ ದಂಗೆ ಅಥವಾ ಸಂಚಿನ ಭಾಗವಾಗಿರಲಿಲ್ಲವೆಂದು ತೀರ್ಮಾನವಾಯಿತು. ಜನರಲ್ ಡಯರ್‌ನನ್ನು ಸೇನಾಹುದ್ದೆಯಿಂದ ವಜಾಮಾಡಲಾಯಿತು. ಅವನಿಗೆ ಭಾರತದಲ್ಲಿ ಯಾವುದೇ ಹುದ್ದೆಯನ್ನು ನೀಡಬಾರದೆಂದು ತೀರ್ಮಾನಿಸಿ ಇಂಗ್ಲೆಂಡಿಗೆ ವಾಪಾಸು ಕಳುಹಿಸಲಾಯಿತು. ಇಂಗ್ಲೆಂಡ್ ತಲುಪಿದ ಮೇಲೆ ಅವನಿಗೆ ಭರ್ಜರಿ ಸ್ವಾಗತ. 'ಪಂಜಾಬ್ ಹಂತಕ'ನಾದ ಆ ಕ್ರೂರಿಗೆ 'ಪಂಜಾಬ್ ರಕ್ಷಕ' ಎಂಬ ಬಿರುದು ಕೆತ್ತಿದ ಖಡ್ಗವನ್ನು ನೀಡಲಾಯಿತು. 'Morning Post' ಎಂಬ ಬ್ರಿಟಿಷ್ ಪತ್ರಿಕೆ ಸಾರ್ವಜನಿಕರಿಂದ ಸುಮಾರು 28 ಸಾವಿರ ಪೌಂಡ್ ನಿಧಿ ಸಂಗ್ರಹಿಸಿ ಅವನಿಗೆ ಅರ್ಪಣೆ ಮಾಡಿತು! ಕೆಲವು ವರ್ಷಗಳ ನಂತರ ಡಯರ್ ಅಪಸ್ಮಾರದಿಂದ ಮರಣ ಹೊಂದಿದ. ಜಲಿಯನ್‌ವಾಲಾ ಬಾಗ್ ಮಾರಣಹೋಮವನ್ನು ಚಿಕ್ಕವಯಸ್ಸಿನಲ್ಲಿ ಕಣ್ಣಾರೆ ಕಂಡಿದ್ದ ಹುಡುಗ ಉಧಮ್ ಸಿಂಗ್‌ನ ಮನಸ್ಸಿನಲ್ಲಿ ಹೆಡೆಯಾಡಿದ್ದ ಪ್ರತೀಕಾರದ ಭಾವನೆ ತೃಪ್ತಿಗೊಳ್ಳಲಿಲ್ಲ. ಸತತವಾಗಿ 21 ವರ್ಷಗಳ ಕಾಲ ಹೊಂಚು ಹಾಕಿ ಇಂಗ್ಲೆಂಡಿಗೆ ಹೋಗಿ ಈ ಹತ್ಯಾಕಾಂಡಕ್ಕೆ ಮೂಲಕಾರಣಕರ್ತನಾದ ಪಂಜಾಬ್ ಗವರ್ನರ್ ಸರ್ ಮೈಖೇಲ್ ಓಡ್ವಯರ್‌ನನ್ನು ಗುಂಡಿಕ್ಕಿ ಕೊಂದ. ಓಡಿಹೋಗುವ ವಿಫಲಪ್ರಯತ್ನ ಮಾಡದೆ ಇಂಗ್ಲೆಂಡಿನಲ್ಲಿಯೇ ನೇಣುಗಂಬವನ್ನೇರಿದ.

ಸ್ವತಂತ್ರಭಾರತದ ಜನರಿಗೆ ಇದಾವುದೂ ಈಗ ನೆನಪಿಲ್ಲ. ಕೋಟ್ಯಂತರ ರೂ. ಖರ್ಚುಮಾಡಿ 'ದೇಶಸೇವೆ' ಮಾಡಲು ತುದಿಗಾಲ ಮೇಲೆ ನಿಂತಿರುವ, ಮಾತೆತ್ತಿದರೆ 'ಹೊಡಿ, ಬಡಿ, ಕಡಿ' ಎನ್ನುವ ರಾಜಕೀಯ ಗೂಂಡಾಗಳ ಭಾವಚಿತ್ರಗಳು ಮತ್ತು ಸುದ್ದಿಗಳು ಪತ್ರಿಕೆಗಳ ಮುಖಪುಟಗಳಲ್ಲಿ ನಿತ್ಯವೂ ಕಂಗೊಳಿಸುತ್ತಿವೆ. ದೇಶಕ್ಕಾಗಿ ಪ್ರಾಣಾರ್ಪಣೆಮಾಡಿದ ಅಮಾಯಕ ಜನರ ಸುದ್ದಿ ಮಾತ್ರ ಎಲ್ಲಿಯೂ ಪ್ರಕಟವಾದಂತೆ ಕಾಣಲಿಲ್ಲ. "Public memory is very poor" (ಸಾರ್ವಜನಿಕರ ಸ್ಮೃತಿ ದುರ್ಬಲ) ಎಂದು ಹೇಳುವುದು ಇದಕ್ಕೇ ಅಲ್ಲವೇ? ಜನರಲ್ ಡಯರ್ ಮಾಡಿದ ನರಮೇಧವನ್ನು ಕಣ್ಣಾರೆ ಕಂಡ ಅನೇಕ ಜನರ ಹೇಳಿಕೆಗಳು ಮತ್ತು ಹತ್ಯಾಕಾಂಡದ ವಿವರಗಳನ್ನುಳ್ಳ ಸಚಿತ್ರ ಕನ್ನಡ ಪುಸ್ತಕ "ಜಲಿಯನ್‌ವಾಲಾ ಬಾಗ್" ಒಂದು ವಾರದ ಹಿಂದೆಯಷ್ಟೇ ಹೊರಬಂದಿದೆ (ಚಿಂತನಗಂಗಾ ಪ್ರಕಾಶನ, ವಿದ್ಯಾನಗರ, ದಾವಣಗೆರೆ). ಯುವ ಲೇಖಕರಾದ ಶಿವಪ್ರಸಾದ ಟಿ ಆರ್ ಬರೆದಿರುವ ಈ ಪುಸ್ತಕದ ಪುಟಗಳನ್ನು ಓದುತ್ತಾ ಹೋದರೆ ಮೈರೋಮಾಂಚನಗೊಳ್ಳುತ್ತದೆ. ಅನೇಕ ಐತಿಹಾಸಿಕ ದಾಖಲೆಗಳು ಮತ್ತು ಪುಸ್ತಕಗಳನ್ನು ಪರಿಶೀಲಿಸಿ ಅತ್ಯಂತ ಶ್ರಮವಹಿಸಿ ಸಿದ್ಧಪಡಿಸಿದ ಪುಸ್ತಕವಿದು. "ಈವರೆಗೂ ಸ್ವಾತಂತ್ರ್ಯಸಂಗ್ರಾಮದ ಅನೇಕ ಪುಸ್ತಕಗಳು ಓದುಗರಿಗೆ ದಕ್ಕಿವೆಯಾದರೂ ಸಂಗ್ರಾಮದ ಮಹತ್ತರ ಘಟ್ಟಗಳ ಬಗೆಗಿನ ವಿಸ್ತೃತ ಬರವಣಿಗೆ ಹೊರಬಂದದ್ದು ತೀರಾ ಕಡಿಮೆ ಅಥವಾ ಇಲ್ಲವೇ ಇಲ್ಲ ಎನ್ನಬಹುದು" ಎಂದು ಡಾ. ಚಂದ್ರಶೇಖರ ಕಂಬಾರರು ಮುನ್ನುಡಿಯಲ್ಲಿ ಬರೆದಿರುವ ಮೆಚ್ಚುಗೆಯ ಮಾತುಗಳಲ್ಲಿ ಅತಿಶಯೋಕ್ತಿಯೇನೂ ಇಲ್ಲ.

ನಮ್ಮ ಯುವಪೀಳಿಗೆ ಕಾಲ್ಪನಿಕ ಕಥೆ-ಕಾದಂಬರಿಗಳನ್ನು ಓದುವ ಬದಲು ನಮ್ಮ ನಾಡಿನ ಇತಿಹಾಸ ಕುರಿತ ಇಂತಹ ಗ್ರಂಥಗಳನ್ನು ಓದುವುದೊಳಿತು. ಪಠ್ಯಪುಸ್ತಕಗಳಲ್ಲಿ ದಾಖಲಾಗಿರುವ ಚರಿತ್ರೆಯ ಘಟನಾವಳಿಗಳು ಕೇವಲ ಪರೀಕ್ಷೆಯನ್ನು ಪಾಸುಮಾಡುವುದಕ್ಕಾಗಿ ಓದಿ ಮರೆಯುವ ಸಂಗತಿಗಳಲ್ಲ. ಹೆಚ್ಚಿನ ಮಾಹಿತಿಯನ್ನು ತಿಳಿದುಕೊಳ್ಳಲು ಅವು ಪ್ರೇರೇಪಣೆ ನೀಡಬೇಕು. ಬದುಕಿನಲ್ಲಿ ಎಲ್ಲವನ್ನೂ ಸ್ವತಃ ಅನುಭವಿಸಿ ಕಲಿಯಬೇಕೆಂದರೆ ಒಂದು ಜೀವಮಾನ ಸಾಕಾಗುವುದಿಲ್ಲ. ಹಿಂದಿನವರ ಜೀವನಾನುಭವವನ್ನು ನಮ್ಮದನ್ನಾಗಿಸಿಕೊಂಡರೆ ಅವರಿಗಿಂತ ಹೆಚ್ಚಿನ ಎತ್ತರಕ್ಕೆ ಬೆಳೆಯಬಹುದು. ಆದರೆ ಮನುಷ್ಯ ಇತಿಹಾಸದಿಂದ ಪಾಠ ಕಲಿಯುವುದಿಲ್ಲ. ಮಾಡಿದ ತಪ್ಪುಗಳನ್ನೇ ಮತ್ತೆ ಮತ್ತೆ ಮಾಡುತ್ತಾನೆ. ಅದು ಅವನ ದೌರ್ಬಲ್ಯ. ಆದಕಾರಣವೇ "History repeats itself" ಎಂದು ಹೇಳುತ್ತಾರೆ. ಇಂದು ರಾಜಕೀಯ ವಿದ್ವೇಷಗಳ ಕಾರಣದಿಂದಾಗಿ ಪ್ರಪಂಚಾದ್ಯಂತ ಅನೇಕ 'ಜಲಿಯನ್‌ವಾಲಾ ಬಾಗ್' ಗಳು ನಿರ್ಮಾಣಗೊಳ್ಳುತ್ತಿವೆ.

ಬಂಡೀಪುರದಂತಹ ಒಂದು ಅಭಯಾರಣ್ಯ. ವನ್ಯಜೀವಿಗಳನ್ನು ನೋಡಲು ಆ ದಟ್ಟಡವಿಯಲ್ಲಿ ಆನೆಗಳ ಮೇಲೆ ಸಫಾರಿ. ಪ್ರವಾಸಿಗರಿಗೆ ತುಂಬಾ ಆಕರ್ಷಣೆ. ಆ ಕಾಡಿನೊಳಗೊಂದು ಅಪರೂಪದ ವಸ್ತುಸಂಗ್ರಹಾಲಯ. ಪ್ರತಿಯೊಂದು ಕೊಠಡಿಯಲ್ಲೂ ಸತ್ತ ಹುಲಿ, ಸಿಂಹ, ಚಿರತೆ, ಕಾಡುಕೋಣ, ಜಿಂಕೆ ಇತ್ಯಾದಿ ಪ್ರಾಣಿಗಳ ನಿರ್ಜೀವ ಶರೀರಗಳನ್ನು ಜೀವಂತವಿರುವಂತೆ ಸಂರಕ್ಷಿಸಿ ಪ್ರದರ್ಶಿಸಲಾಗಿತ್ತು. ಅವುಗಳನ್ನು ಪ್ರವಾಸಿಗರು ನಿರ್ಭೀತರಾಗಿ ನೋಡಿ ಆನಂದಿಸುತ್ತಾ ಮುಂದೆ ಸಾಗಿದರೆ Exit ಗೆ ಮುಂಚೆ ಒಂದು ಆಕರ್ಷಕವಾದ ಸೂಚನಾಫಲಕ. ಅದರಲ್ಲಿ ಹೀಗೆ ಬರೆಯಲಾಗಿತ್ತು: "Do you want to see the most cruel animal in this world? Please lift this

curtain!" (ಈ ಪ್ರಪಂಚದಲ್ಲಿರುವ ಅತ್ಯಂತ ಕ್ರೂರವಾದ ಪ್ರಾಣಿಯನ್ನು ನೀವು ನೋಡಲು ಬಯಸುತ್ತೀರಾ? ದಯಮಾಡಿ ಈ ಪರದೆಯನ್ನು ಮೇಲೆತ್ತಿ). ಪ್ರವಾಸಿಗರು ಕುತೂಹಲದಿಂದ ಏನಿರಬಹುದೆಂದು ಪರದೆಯನ್ನು ಸರಿಸಿದರೆ ಅಲ್ಲಿ ಕಾಣಬರುವುದೇನು! ಆ ಪರದೆಯ ಹಿಂದೆ ಒಂದು ದೊಡ್ಡ ಕನ್ನಡಿ, ಅದರೊಳಗೆ ಪರದೆ ಸರಿಸಿದ ಪ್ರವಾಸಿಗನ ಮುಖ! ಕನ್ನಡಿ ಸಿಕ್ಕರೆ ಓರೆನೋಟ ಬೀರದವರಾರು? ಪಾಪ, ಆ ಕನ್ನಡಿ ಏನು ಪಾಪ ಮಾಡಿತ್ತೋ ಏನೋ, ಯಾರೂ ಅದನ್ನು ನೋಡಲು ಇಷ್ಟಪಡುವುದಿಲ್ಲ. ಅದನ್ನು ನೋಡಿದ ಪ್ರತಿಯೊಬ್ಬ ಪ್ರವಾಸಿಗ ಕೂಡಲೇ ಪರದೆಯನ್ನು ಕೆಳಕ್ಕೆ ತಳ್ಳಿ ಕನ್ನಡಿಯನ್ನು ನೋಡಿಯೂ ನೋಡದವನಂತೆ ನಟಿಸಿ ಪಕ್ಕದವರಿಗೆ ತನ್ನ ಮುಖ ಕಾಣಿಸಿಕೊಳ್ಳದಂತೆ ನಾಚಿಕೆಯಿಂದ ಮುಂದೆ ಸಾಗುವ ಆ ನೋಟ ತುಂಬಾ ಆಕರ್ಷಣೀಯ!

ಈ ಪ್ರಪಂಚದಲ್ಲಿ ಕ್ರೂರಿಗಳೂ ಇದ್ದಾರೆ, ಸಂಪನ್ನರೂ ಇದ್ದಾರೆ. ಕ್ರೌರ್ಯ ಹಗೆತನಕ್ಕೆ ಕಾರಣವಾಗುತ್ತದೆ. ಹಗೆತನ ಕ್ರೌರ್ಯಕ್ಕೂ ಕಾರಣವಾಗುತ್ತದೆ. ಹಾಗೆಂದಮಾತ್ರಕ್ಕೆ ಕ್ರೂರಿಯೆನಿಸಿದ ವ್ಯಕ್ತಿ ಸದಾಕಾಲ ಸರ್ವರಿಗೂ ಕ್ರೂರಿಯಾಗಿಯೇ ಇರುತ್ತಾನೆಂದು ಹೇಳಲು ಬರುವುದಿಲ್ಲ. ಒಬ್ಬನೇ ವ್ಯಕ್ತಿಯಲ್ಲಿ ಕ್ರೌರ್ಯ ಮತ್ತು ಸಂಪನ್ನತೆ ಎರಡೂ ಇರುತ್ತವೆ. ತನಗೆ ಬೇಡವಾದವರಿಗೆ ಅವನು ಕ್ರೂರಿಯಾಗಿ ಕಾಣಿಸಬಹುದು, ತನಗೆ ಬೇಕಾದವರಿಗೆ ಅವನು ಸಂಪನ್ನನಾಗಿರಬಹುದು. ಕ್ರೂರಮೃಗವೆನಿಸಿದ ಹುಲಿ ಅಥವಾ ಸಿಂಹ ತನ್ನ ಕರುಳ ಕುಡಿಯಾದ ಮರಿಗಳನ್ನು ಮುದ್ದಿನಿಂದ ಸಾಕುತ್ತವೆಯಲ್ಲವೇ? ಆದರೆ ಒಂದು ವ್ಯತ್ಯಾಸ. ಪ್ರಾಣಿಗಳಲ್ಲಿ ಕಂಡು ಬರುವ ಕ್ರೌರ್ಯ ಹೊಟ್ಟೆ ಹಸಿವಾದಾಗ ಅಥವಾ ಭಯ ಉಂಟಾದ ಸಂದರ್ಭಗಳಲ್ಲಿಯೇ ಹೊರತು ದ್ವೇಷದಿಂದ ಖಂಡಿತಾ ಅಲ್ಲ. ಯಾವ ಕ್ರೂರಪ್ರಾಣಿಯೂ ತನಗೆ ಆಗದವರ ವಿರುದ್ಧ ಸೇಡುತೀರಿಸಿಕೊಳ್ಳುವ ದ್ವೇಷಭಾವನೆಯ ವಿಷಬೀಜವನ್ನು ತನ್ನ ವಂಶದವರ ಮತ್ತು ತನ್ನ ಸಂತಾನದ ಮನಸ್ಸಿನಲ್ಲಿ ಬಿತ್ತುವುದಿಲ್ಲ. ರಾಷ್ಟ್ರಕವಿ ಜಿ.ಎಸ್ ಶಿವರುದ್ರಪ್ಪನವರ ಈ ಕೆಳಗಿನ ಕವಿತೆಯನ್ನು ಗಮನಿಸಿ:

**ಈಚೀಚೆಗೆ ನನಗೆ ಒಂದೊಂದು ಸಲ ಅನಿಸುತ್ತದೆ:**
**ಮನುಷ್ಯರಿಗಿಂತ ಪ್ರಾಣಿಗಳೇ ವಾಸಿ.**
**ನಾಯಿಗಳು ಮುಂದೆ ತಿಂದು ಹಿಂದೆ ಬೊಗಳುವುದಿಲ್ಲ.**
**ಹುಲಿಗಳು ಹೊಟ್ಟೆ ತುಂಬಿದ ಹೊತ್ತು**
**ಮತ್ತೊಂದಕ್ಕೆ ಬಾಯಿ ಹಾಕುವುದಿಲ್ಲ.**
**ಹಾವುಗಳು ರೇಗಿಸಿದಾಗ ಅಲ್ಲದೆ ಉಳಿದಂತೆ ಕಚ್ಚುವುದಿಲ್ಲ.**
**ಹಸುಗಳು ಯಾವ ಪ್ರತಿಷ್ಠೆಗೂ ಪರದಾಡುವುದಿಲ್ಲ**
**ಕತ್ತೆಗಳು ನೆನಪಿಟ್ಟುಕೊಂಡು ಒದೆಯುವುದಿಲ್ಲ!**

ದೀಪಾವಳಿ ಹಬ್ಬದಂದು ಊರಿನ ಪಡ್ಡೆ ಹುಡುಗರು ಕತ್ತೆಯ ಬಾಲಕ್ಕೆ ಒಂದು ಡಬ್ಬವನ್ನು ಕಟ್ಟಿ ಅದರಲ್ಲಿ ಪಟಾಕಿಯನ್ನಿಟ್ಟು ಸಿಡಿಸುತ್ತಾರೆ. ಕತ್ತೆ ಹೆದರಿ ಬಾಲಕ್ಕೆ ಕಟ್ಟಿದ ಡಬ್ಬವನ್ನು 'ಡಬ್, ಡಬ್' ಎಂದು ಒದೆಯುತ್ತಾ ಓಡುವುದನ್ನು ನೋಡಿ ಹುಡುಗರು ಕೇಕೆ ಹೊಡೆಯುವುದನ್ನು ನೀವು ನೋಡಿರಬಹುದು. ಆ ಕತ್ತೆ ಸಿಟ್ಟಿಗೆದ್ದು ಮಾರನೆಯ ದಿನ ತನ್ನ ಬಾಲಕ್ಕೆ ಡಬ್ಬ ಕಟ್ಟಿದ್ದ ಆ ದಂಡಪಿಂಡ ಯಾರೆಂದು ಅವನ ಮನೆ ಹುಡುಕಿಕೊಂಡು ಹೋಗಿ ಒದೆಯುವುದಿಲ್ಲ. ಹಾಗೆ ನೆನಪಿಟ್ಟುಕೊಂಡು ಒದೆಯುವ ಕತ್ತೆ ಎಂದರೆ ಮನುಷ್ಯನಲ್ಲದೆ ಮತ್ತಾರು?

15.4.2009

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑